ಗೋಪಲದಾಸರಾಯ ನಿನ್ನಯಪಾದ

ಗೋಪಲದಾಸರಾಯ ನಿನ್ನಯಪಾದ ನಾಪೊಂದಿದೆನೋ ನಿಶ್ಚಯ

ಈ ಪೀಡಿಸುವ ತ್ರಯ ತಾಪಗಳೊಡಿಸಿ ಕೈಪಿಡಿದೆನ್ನನು ನೀ ಪಾಲಿಸನುದಿನ

ಘೋರ ವ್ಯಾಧಿಗಳ ನೋಡಿ ವಿಜಯರಾಯ ಭೂರಿ ಕರುಣವ ಮಾಡಿ ತೋರಿದರಿವರೆ ಉದ್ಧಾರಕರೆಂದದಿ ನಾರಭ್ಯತವಪಾದ ಸಾರಿದೆ ಸಲಹೆಂದು

ಸೂರಿಜನ ಸಂಪ್ರೀಯ ಸುಗುಣೋದ್ಧಾರ ದುರುಳನ ದೋಷ ನಿಚಯವ ದೂರಗೈಸೋ ದಯಾಂಬುನಿಧ

ನಿವಾರಿಸಿ ಕರಪಿಡಿದು ಬೇಗನೆ ।

ಅಪಮೃತ್ಯುವಿನ ತರಿದೆ ಎನ್ನೊಳಗಿದ್ದ

ಅಪರಾಧಂಗಳ ಮರೆದೆ

ಚಪಲಚಿತ್ತನಿಗೊಲಿದು ವಿಪುಳಮತಿಯನಿತ್ತು

ನಿಪುಣನೆಂದೆನಿಸಿದೆ ತಪಸಿಗಳಿಂದಲೀ

ಕೃಪಣವತ್ಸಲ ನಿನ್ನ ಕರುಣೆಗೆ ಉಪಮೆಗಾಣೆನೋ

ಸಂತತವು ಕಾಶ್ಯಪಿಯೊಳಗೆ ಬುಧರಿಂದ

ಜಗದಾಧಿಫನ ಕಿಂಕರನೆನಿಸಿ ಮೆರೆದೆ ।

ಎನ್ನಪಾಲಿಸಿದಂದದಿ ಸಕಲ ಪ್ರಪನ್ನರ

ಸಲಹೋ ಮೋದಿ

ಅನ್ಯರಿಗೀಪರಿ ಬಿನ್ನಪಗೈಯೆ

ಜಗನ್ನಾಥವಿಠಲನ ಸನ್ನುತಿಸುವ ಧೀರ ॥

ನಿನ್ನ ನಂಬಿದ ಜನರಿಗೀಪರಿ ಬನ್ನವೆ

ಭಕ್ತಾನುಕಂಪಿ ಶರಣ್ಯ ಬಂದೊದಗಿ ಸಮಯದಿ ಅಹರ್ನಿಶಿ ಧ್ಯಾನಿಪೆನು ನಿನ್ನನು ॥